ಓ.ಎಸ್ ನಂ.*200/2013*

ಡಿ.ಡಬ್ಲು-೨

ಸಾಕ್ಷಿಯನ್ನು ಇಂದು ದಿನಾಂಕಃ *17.06.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದ**

ದಾವಾ ಜಮೀನುಗಳು ಒಟ್ಟು ಎರಡು ಜಮೀನುಗಳಿವೆ, ಅವು ಎಷ್ಟು ಕ್ಷೇತ್ರ ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಸದರಿ ಜಮೀನುಗಳ ಸ.ನಂ. ಹೇಳಲು ಬರುವುದಿಲ್ಲ. ಒಂದು ಜಮೀನಿನ ಚೆಕಬಂದಿ ಪೂರ್ವಕ್ಕೆ ಅವರದೇ ಇನ್ನೊಂದು ಜಮೀನು, ಪಶ್ಚಿಮಕ್ಕೆ ಅಮೃತ ಧೂಳೆ ಅವರ ಜಮೀನು, ಉತ್ತರಕ್ಕೆ ಮಚ್ಚೀಂದ್ರ ಧೂಳೆ ಅವರ ಜಮೀನು, ದಕ್ಷಿಣಕ್ಕೆ ಮಲ್ಲಪ್ಪ ಧೂಳೆ ಅವರ ಜಮೀನು ಇರುತ್ತದೆ. ಇನ್ನೊಂದು ಜಮೀನಿನ ಚೆಕಬಂದಿ, ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಮಲ್ಲಪ್ಪ ಧೂಳೇ ಅವರ ಜಮೀನು, ಉತ್ತರಕ್ಕೆ ಕಲ್ಯಾಣರಾವ ರವರ ಜಮೀನು, ದಕ್ಷಿಣಕ್ಕೆ ಅವರದೇ

ಸ್ವಂತ ಜಮೀನು ಇರುತ್ತದೆ. ನಾನು ಆಗಾಗ ದಾವಾ ಜಮೀನುಗಳಿಗೆ ಹೋಗುತ್ತಾ ಇರುತ್ತೇನೆ. ವಾದಿಯು ಸುಮಾರು 30 ವರ್ಷಗಳಿಂದ ಉಮರ್ಗಾದಲ್ಲಿಯೇ ಉದ್ಯೋಗ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ವಾದಿ ನಂ.೧ ಸರಾಯಿ ಅಂಗಡಿಯ ಪರವಾನಿಗೆ ಪಡೆದು ಅಲ್ಲಿಯೇ ಉದ್ಯೋಗ ಮಾಡಿಕೊಂಡು ಇದ್ದಾರೆ ಎಂದರೆ ಸರಿ. ವಾದಿಯರು ಸರಾಯಿ ಅಂಗಡಿಯಿಂದ ಬಂದ ಆದಾಯದ ಮೇಲಿಂದ ಸ್ವಂತ ಜಮೀನುಗಳನ್ನು ಹಿಡಿದಿರುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಇಲ್ಲಿಂದ ಬಂದ ಆದಾಯದಿಂದಲೇ ಜಮೀನುಗಳನ್ನು ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ ವಾದಿ ನಂ.೧ ರವರಿಗೆ ಜಮೀನು ಹಿಡಿಯಲು ಹಣ ಕೊಡುವುದನ್ನೇನಾದರೂ ನೋಡಿದ್ದೀರಾ ಎಂದರೆ ಸಾಕ್ಷಿಯು ಅವರು ಒಟ್ಟಿಗೆ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಹಣ ಕೊಡುವುದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಕಿಣ್ಣಿ ಸುಲ್ತಾನ ಗ್ರಾಮದಲ್ಲಿರುವ ಜಮೀನಿನ ಎಲ್ಲಾ ಆದಾಯವು ಪ್ರತಿವಾದಿಯ ಬಳಿಯೇ ಇರುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಇಬ್ಬರು ಕೂಡಿಯೇ ಇರುತ್ತದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಯರ ತಾಯಿಯನ್ನು ನಾನು ನೋಡಿರುತ್ತೇನೆ. ವಾದಿಯು ಉಮರ್ಗಾ ತಾಲೂಕಿನಲ್ಲಿ ಜಮೀನುಗಳನ್ನು ಖರೀದಿ ಹಿಡಿದಿರುತ್ತಾರಾ ಎಂದರೆ ಸಾಕ್ಷಿಯು ತೆಗೆದುಕೊಂಡಿರುತ್ತಾರೆ ಎಲ್ಲಿ ತೆಗೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವಾಗ ತೆಗೆದುಕೊಂಡಿರುತ್ತಾರೆ, ಎಷ್ಟಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಾದಿಯು ಪೇಟಸಾಂಗವಿ ಗ್ರಾಮದಲ್ಲಿ ಜಮೀನನ್ನು ಖರೀದಿ ಹಿಡಿದಿರುತ್ತಾನೆ ಎಂದು ಹೇಳಿ ಬರೆಸಿರುತ್ತೇನೆ. ಕಿಣ್ಣಿ ಸುಲ್ತಾನ ಗ್ರಾಮದಲ್ಲಿರುವ ಜಮೀನುಗಳಲ್ಲಿ ಮಾತ್ರ ವಾದಿ ನಂ.೧, ೨, ಮತ್ತು ಪ್ರತಿವಾದಿಗೆ ಪಾಲು ಇರುತ್ತದೆ, ವಾದಿ ನಂ.೧ ಸ್ವಂತ ಹಿಡಿದ ಜಮೀನುಗಳಲ್ಲಿ ಪ್ರತಿವಾದಿ ಮತ್ತು ವಾದಿ ನಂ.೨ ರವರಿಗೆ ಪಾಲು ಇದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಎಲ್ಲರೂ ಕೂಡಿಯೇ ಖರೀದಿ ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನನ್ನ ಗೆಳೆಯ ಎಂದರೆ ಸರಿ. ನಾನು ಪ್ರತಿವಾದಿಯ ಮಾತನ್ನು ಕೇಳಿಕೊಂಡು ಉಮರ್ಗಾದಲ್ಲಿ ವಾದಿ ಮತ್ತು ಪ್ರತಿವಾದಿಯರು ಕೂಡಿ ಜಮೀನು ಹಿಡಿದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಉಮರ್ಗಾದಲ್ಲಿರುವ ಆಸ್ತಿಗೆ ಪ್ರತಿವಾದಿ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.